# ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು

## ಸತ್ರ ಮೊಕದ್ದಮೆ ಸಂಖ್ಯೆ 26/2022

ಚಾ.ಸಾಃ 18 ಪ್ರಾ.ಸಾಃ 13

ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ 26.03.2026

**ಆರೋಪಿತರ ಪರ ಶ್ರೀ ಎಸ್.ವಾಯ್ ವಕೀಲರಿಂದ ಪಾಟೀ ಸವಾಲುಃ-**

11. ಒಬ್ಬ ಪೋಲಿಸ್ ಅಧಿಕಾರಿ ಅವರ ವ್ಯಾಪ್ತಿ ಬಿಟ್ಟು ಬೇರೆ ಠಾಣೆಯ ವ್ಯಾಪ್ತಿಯಲ್ಲಿ ಒಬ್ಬ ವ್ಯಕ್ತಿಯನ್ನು ದಸ್ತಗಿರಿ ಮಾಡಲು ಹೋದಾಗ ಸಂಬಂಧಪಟ್ಟ ಪೋಲಿಸರಿಗೆ ಅಥವಾ ಎಸ್.ಪಿ ರವರಿಗೆ ಮಾಹಿತಿ ಕೊಡಬೇಕು ಎಂದರೆ ಅವರ ಸಹಾಯಬೇಕಾದರೆ ಮಾತ್ರ ಮಾಹಿತಿ ಕೊಡಬೇಕು.

12. ಒಬ್ಬ ಪೋಲಿಸ್ ಅಧಿಕಾರಿ ಅವರ ವ್ಯಾಪ್ತಿ ಬಿಟ್ಟು ಬೇರೆ ಠಾಣೆಯ ವ್ಯಾಪ್ತಿಯಲ್ಲಿ ಒಬ್ಬ ವ್ಯಕ್ತಿಯನ್ನು ಪತ್ತೆ ಮಾಡಲು ಹೋದಾಗ ಸಂಬಂಧಪಟ್ಟ ಪೋಲಿಸರಿಗೆ ಅಥವಾ ಎಸ್.ಪಿ ರವರಿಗೆ ಮಾಹಿತಿ ಕೊಡಬೇಕು ಎಂದರೆ ಅವರ ಸಹಾಯಬೇಕಾದರೆ ಮಾತ್ರ ಮಾಹಿತಿ ಕೊಡಬೇಕು.

13. ಚಾಸಾ-1 ರಾಯಚೂರು ತಾಲೂಕಿನ ವ್ಯಾಪ್ತಿಯಲ್ಲಿನ ಅಧಿಕಾರಿ ಅಲ್ಲ ಎನ್ನುವುದು ನಿಜ. ಚಾಸಾ-1 ಇವರು ತಮ್ಮ ಪೋಲಿಸ್ ಠಾಣೆ ವ್ಯಾಪ್ತಿಯ ಎಸ್.ಪಿ ರವರಿಗೆ ಆರೋಪಿ ಪತ್ತೆಗೆ ಹೋದ ಬಗ್ಗೆ ಮಾಹಿತಿ ಕೊಟ್ಟಿರಲಿಲ್ಲ ಎನ್ನುವುದು ನಿಜ. 1 ನೇ ಆರೋಪಿಯನ್ನು ಗುನ್ನೆ ನಂ.74 ರಲ್ಲಿ ದಸ್ತಗಿರಿ ಮಾಡಿದ್ದರು ಎಂದರೆ ವಿಚಾರಣೆ ಕುರಿತು ಕರೆದುಕೊಂಡು ಹೋಗುವಾಗ ಮುಂದಿನ ಊರಿನಲ್ಲಿ ಅವರನ್ನು ತಡೆಹಿಡಿದಿದ್ದಾರೆ.

ಈ ರೀತಿ ವಿಚಾರಣೆಗೆ ಕರೆದುಕೊಂಡು ಹೋದಾಗ ಆತನ ಮನೆಯವರಿಗೆ ಮಾಹಿತಿ ಕೊಡಬೇಕು ಎಂದರೆ ಅರೆಸ್ಟ ಮಾಡಿದರೆ ಮಾತ್ರ ಮಾಹಿತಿ ಕೊಡಬೇಕು. ಚಾಸಾ-1 ರವರು 1 ನೇ ಆರೋಪಿತನನ್ನು ದಸ್ತಗಿರಿ ಮಾಡಿದ್ದರು ಎನ್ನುವುದು ಸರಿಯಲ್ಲ ಮತ್ತು ಅದೇ ರೀತಿ ದೂರಿನಲ್ಲಿ ಬರೆದಿದ್ದಾರೆ ಎನ್ನುವುದು ಸರಿಯಲ್ಲ.

14. ಸಣ್ಣವಿರೇಶ (ಚಾಸಾ-8) ಇವರ ಫೋನಿನ ಸಿಡಿಆರ್ ಪಡೆದಿಲ್ಲ. ಯಾದಗಿರಿ ಡಿ.ಎಸ್.ಪಿ ಇವರನ್ನು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾನು ವಿಚಾರಣೆ ಮಾಡಿ ಹೇಳಿಕೆ ಪಡೆದಿಲ್ಲ.

15. ಎಂ.ಎಲ್.ಸಿ ವರದಿಯನ್ನು ಈ ಪ್ರಕರಣದಲ್ಲಿ ಹಾಜರು ಪಡಿಸಿದ್ದೇನೆ. ಬಂಡಯ್ಯ ಎನ್ನುವವರು ಎಂ.ಎಲ್.ಸಿ ಸ್ವೀಕರಿಸಿದ ಬಗ್ಗೆ ಸಹಿ ಮಾಡಬೇಕಾಗಿತ್ತು, ಆದರೆ ಕಣ್ಣುತಪ್ಪಿನಿಂದ ನಾನು ಸಹಿ ಮಾಡಿದ್ದೇನೆ. ಎಂ.ಎಲ್.ಸಿ ವರದಿಯಲ್ಲಿ (ನಿಡಿ.1) ಸ್ವೀಕರಿಸಿದ ದಿನಾಂಕ 14.07.2021 ಎಂದು ನಮೂದು ಇದೆ. ಸಾಕ್ಷಿ ಸ್ವತಃ ಹೇಳುತ್ತಾರೆ ಅದು ಕಣ್ಣುತಪ್ಪಿನಿಂದ ತಪ್ಪಾಗಿದೆ. ಉದ್ದೇಶಪೂರ್ವಕವಾಗಿ ಆರೋಪಿತರನ್ನು ಈ ಕೇಸಿನಲ್ಲಿ ಸೇರಿಸುವುದಕ್ಕಾಗಿ ನಾನು ದಾಖಲೆಗಳನ್ನು ಸೃಷ್ಠಿ ಮಾಡಿದ್ದೇನೆ ಎನ್ನುವುದು ಸರಿಯಲ್ಲ.

16. ವಡಗೇರಾ ಪೋಲಿಸ್ ಠಾಣೆಯ ಎಸ್.ಹೆಚ್.ಡಿ ರಲ್ಲಿ ಕ್ರಮ ಸಂಖ್ಯೆ 13 ರಲ್ಲಿ 09.30 ಕ್ಕೆ ಠಾಣೆಯಿಂದ ಖಾಸಗಿ ವಾಹನದಲ್ಲಿ ಹೊರಟ ಬಗ್ಗೆ ಮತ್ತು ಕ್ರಮ ಸಂಖ್ಯೆ 22 ರಲ್ಲಿ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ನಮೂದು ಇದೆ ಎನ್ನುವುದು ನಿಜ. ಸದರಿ ಖಾಸಗಿ ಆಸ್ಪತ್ರೆಯ ದಾಖಲೆಗಳನ್ನು ನಾನು ಪಡೆದಿಲ್ಲ. ಸದರಿ ಕ್ರಮ ಸಂಖ್ಯೆ 13 ಮತ್ತು 22 ರ ಮಧ್ಯ ಚಾಸಾ-1 ರವರ ಮೇಲೆ ಹಲ್ಲೆ ಮಾಡಿದ ಬಗ್ಗೆ ಮತ್ತು ಅವರನ್ನು ತಡೆದ ಬಗ್ಗೆ ಯಾವುದೇ ಉಲ್ಲೇಖ ಇಲ್ಲ ಎನ್ನುವುದು ನಿಜ.

17. ನಿಪಿ.2 ರ ಮಹಜರನ್ನು ನಾನು ಮಾಡಿದ್ದೇನೆ. ನಿಪಿ.2 ರ ಮಹಜರನ 5 ನೇ ಪ್ಯಾರದಲ್ಲಿ ಚಾಸಾ-1 ಸ್ಥಳ ತೋರಿಸಿದ ಬಗ್ಗೆ ನಮೂದು ಇದೆ ಎನ್ನುವುದು ನಿಜ. ಸುಮಾರು 10 ಜನರು ಕಲ್ಲು ತೂರಾಟ ಮಾಡಿದ ಬಗ್ಗೆ ಸದರಿ ಪ್ಯಾರ 5 ರಲ್ಲಿ ನಮೂದು ಇದೆ ಎನ್ನುವುದು ನಿಜ. ಗುನ್ಹೆ ಸ್ಥಳದ ಪಶ್ಚಿಮಕ್ಕೆ ಲಚುಮಣ್ಣ ಇವರ ಮನೆ ಇರುವ ಬಗ್ಗೆ ನಿಪಿ.2 ರಲ್ಲಿ ನಮೂದು ಇದೆ ಎನ್ನುವುದು ನಿಜ. ಸದರಿ ಲಚುಮಣ್ಣ ಇವರ ಹೇಳಿಕೆಯನ್ನು ಪಡೆದಿಲ್ಲ. ನಿಪಿ.2 ರಲ್ಲಿಯ ನಕ್ಷೆಯನ್ನು ನಮ್ಮ ಠಾಣೆಯ ರೈಟರ್ ಬರೆದಿದ್ದಾರೆ, ಅದರಲ್ಲಿ ಗುನ್ಹೆ ಸ್ಥಳ ತೋರಿಸಲಾಗಿದೆ. ಮೂರು ಕಲ್ಲುಗಳು ಮತ್ತು ಎರಡು ಕಟ್ಟಿಗೆಗಳು ಸ್ಥಳದಲ್ಲಿ ಬಿದ್ದಿದ್ದವು ಎಂದು ನಿಪಿ.2 ರ ಮಹಜರದಲ್ಲಿ ನಮೂದಿಸಿಲ್ಲ ಎನ್ನುವುದು ಸರಿಯಲ್ಲ. ಮೂರು ಕಲ್ಲುಗಳು ಮತ್ತು ಎರಡು ಕಟ್ಟಿಗೆಗಳು ಸ್ಥಳದಲ್ಲಿ ಬಿದ್ದಿದ್ದವು ಎಂದು ನಕ್ಷೆಯಲ್ಲಿ ತೋರಿಸಿಲ್ಲ ಎನ್ನುವುದು ಸರಿಯಲ್ಲ. (ಸದರಿ ನಕ್ಷೆಯಲ್ಲಿ ಅಂತಹ ನಮೂದು ಇಲ್ಲದೆ ಇರುವುದನ್ನು ನ್ಯಾಯಾಲಯ ಗಮನಿಸಿರುತ್ತದೆ).

18. ನಿಪಿ.3 ರ ಫೋಟೋದಲ್ಲಿ ಕಾಣುವ ರಸ್ತೆಯ ಎರಡೂ ಬದಿಗಳಲ್ಲಿ ಮನೆಗಳು ಇರುತ್ತವೆ ಎನ್ನುವುದು ನಿಜ. ಸಾಕ್ಷಿ ಸ್ವತಃ ಹೇಳುತ್ತಾರೆ ಮನೆಗಳು ದೂರ ಇರುತ್ತವೆ. ಸದರಿ ಮನೆಗಳಲ್ಲಿ ಇರುವವರಿಗೆ ಗುನ್ಹೆ ಸ್ಥಳ ಕಾಣುತ್ತದೆ ಎನ್ನುವುದು ನಿಜ.

19. ಚಾಸಾ-1 ರವರ ಮರುಹೇಳಿಕೆಯಲ್ಲಿ ಚಾಸಾ-1 ಇವರು ಆರೋಪಿತರನ್ನು ಪೋಲಿಸ್ ಠಾಣೆಯಲ್ಲಿ ಗುರುತಿಸಿದ ಬಗ್ಗೆ ನಮೂದು ಇದೆ ಎನ್ನುವುದು ನಿಜ. ಚಾಸಾ-4 ರಿಂದ 7 ರವರ ಹೇಳಿಕೆಗಳು ಒಂದೇ ರೀತಿಯ ಹೇಳಿಕೆಗಳು ಇರುತ್ತವೆ ಎನ್ನುವುದು ನಿಜ. ಸಾಕ್ಷಿ ಸ್ವತಃ ಹೇಳುತ್ತಾರೆ ಅವರೆಲ್ಲರೂ ಒಂದೇ ಸ್ಥಳದಲ್ಲಿ ಇದ್ದರು.

20. ನಿಪಿ.9 ರ ದೂರಿನಲ್ಲಿರುವ ಹಿಂಬರಹದಲ್ಲಿ ದಿನಾಂಕ ಮತ್ತು ಸಮಯ ತಿದ್ದುಪಡೆ ಆಗಿರುತ್ತದೆ ಎನ್ನುವುದು ನಿಜ.

21. ವಶಪಡಿಸಿಕೊಂಡ ಮುದ್ದೆ ಮಾಲುಗಳ ಬಗ್ಗೆ ನ್ಯಾಯಾಲಯಕ್ಕೆ ಪಿ.ಎಫ್ ಸಲ್ಲಿಸಿದ್ದೇನೆ. ಪಿ.ಎಫ್ ನ್ಯಾಯಾಲಯಕ್ಕೆ ಕೊಡಲು ದಿನಾಂಕ 16.07.2021 ರಂದು ಕೋರ್ಟ್ ಪಿಸಿ ಬಳಿ ಕೊಟ್ಟಿರುತ್ತೇನೆ. ನ್ಯಾಯಾಲಯಕ್ಕೆ ಪಿ.ಎಫ್ ಸಲ್ಲಿಸಿದ ದಿನಾಂಕ ಹೇಳಲಾಗುವುದಿಲ್ಲ. ಪಿ.ಎಫ್ ನ್ಯಾಯಾಲಯಕ್ಕೆ ಸಲ್ಲಿಸಿದ ದಿನಾಂಕ ಹೇಳಲಾಗುವುದಿಲ್ಲ. ವಶಪಡಿಸಿಕೊಂಡ ವಸ್ತುಗಳು ನ್ಯಾಯಾಲಯಕ್ಕೆ ಸಲ್ಲಿಸುವವರೆಗೆ ಯಾರ ಬಳಿ ಇದ್ದವು ಎಂದು ಆರೋಪಪಟ್ಟಿಯಲ್ಲಿ ಉಲ್ಲೇಖ ಇಲ್ಲ, ಆದರೆ ತನಿಖಾಧಿಕಾರಿಯ ವಶದಲ್ಲಿ ಇರುತ್ತವೆ. ಸದರಿ ವಸ್ತುಗಳನ್ನು ವೈದ್ಯರಿಗೆ ತೋರಿಸಿ ಅಭಿಪ್ರಾಯ ಪಡೆದಿಲ್ಲ.

22. ಗುನ್ಹೆ ಸ್ಥಳ ಸಾರ್ವಜನಿಕ ರಸ್ತೆ ಎನ್ನುವುದು ನಿಜ. ನಾನು ಘಟನೆಯಾದ ಮೂರು ದಿನಗಳ ನಂತರ ಗುನ್ಹೆ ಸ್ಥಳಕ್ಕೆ ಭೇಟಿಕೊಟ್ಟಿರುತ್ತೇನೆ ಎನ್ನುವುದು ನಿಜ. ನಾನು ಗುನ್ಹೆ ಸ್ಥಳಕ್ಕೆ ಭೇಟಿಕೊಡುವವರೆಗೆ ಮು.ಮಾ.1 ರಿಂದ 5 ಗುನ್ಹೆ ಸ್ಥಳದಲ್ಲಿಯೇ ಬಿದ್ದಿದ್ದವು.

23. 1 ನೇ ಆರೋಪಿಯನ್ನು ವಶಕ್ಕೆ ಪಡೆದ ಸ್ಥಳದಲ್ಲಿ ಅಂದರೆ ಹನುಮಂತ ದೇವರ ಗುಡಿಯ ಹತ್ತಿರ ನಾನು ಮಹಜರ ಮಾಡಿಲ್ಲ.

24. ಹೆಚ್.ಸಿ 259 ರವರು ಚಾಸಾ-1 ರವರ ಮೌಖಿಕ ದೂರನ್ನು ಪಡೆದ ಬಗ್ಗೆ ಚಾಸಾ-1 ರವರನ್ನು ನಾನು ವಿಚಾರಣೆ ಮಾಡಿಲ್ಲ.

25. ನಾನು ಹೇಮನಾಳ ಗ್ರಾಮದ ಗುನ್ಹೆ ಸ್ಥಳಕ್ಕೆ ಭೇಟಿಕೊಟ್ಟು ಸ್ಥಳೀಯರ ಹೇಳಿಕೆ ಪಡೆದಿದ್ದೇನೆ.

26. ಸ್ಥಳಕ್ಕೆ ತೆಗೆದುಕೊಂಡು ಹೋಗಿದ್ದ ವಾಹನ ಮಾಲಿಕರ ಹೇಳಿಕೆ ಪಡೆದಿಲ್ಲ ಮತ್ತು ವಾಹನದ ದಾಖಲೆ ಪಡೆದಿಲ್ಲ.

27. ನಾನು ಸ್ಥಳಕ್ಕೆ ಭೇಟಿಕೊಟ್ಟಿಲ್ಲ ಮತ್ತು ಮಹಜರ ಮಾಡಿಲ್ಲ ಎನ್ನುವುದು ಸುಳ್ಳು. ನಾನು ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ ಎನ್ನುವುದು ಸುಳ್ಳು. ನಾನು ಯಾವುದೇ ಸಾಕ್ಷಿದಾರರ ಹೇಳಿಕೆ ಪಡೆದಿಲ್ಲ ಎನ್ನುವುದು ಸುಳ್ಳು.

28. ಆರೋಪಿತರು ಯಾವುದೇ ತಪ್ಪು ಮಾಡಿಲ್ಲ ಎಂದು ಕಂಡು ಬಂದರೂ ಸಹ ಡಿ.ಎಸ್.ಪಿ ಯಾದಗಿರಿ ಇವರ ಒತ್ತಡದಿಂದ ಸುಳ್ಳು ಆರೋಪಪಟ್ಟಿಯನ್ನು ಸಲ್ಲಿಸಿದ್ದೇನೆ ಎನ್ನುವುದು ಸರಿಯಲ್ಲ. ಚಾಸಾ-1 ರವರು ಮಾಡಿದ ತಪ್ಪನ್ನು ಮುಚ್ಚಿಹಾಕುವುದಕ್ಕಾಗಿ ಸುಳ್ಳು ಆರೋಪಪಟ್ಟಿ ಸಲ್ಲಿಸಿದ್ದೇನೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ.ಇದೆ.

**(ಹತ್ತಿಕಾಳ ಪ್ರಭು ಸಿದ್ದಪ್ಪ)**
ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು.